# ತುಮಕೂರು ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103**

**ಸಂಖ್ಯೆ: ತುವಿ: ಡಿಇವಿ-02:2025-26/1921** **ದಿನಾಂಕ:17.09.2025**

**ಸುತ್ತೋಲೆ**

**ವಿಷಯ: ವಿದ್ಯಾರ್ಥಿನಿಯರು ಕರ್ನಾಟಕ ಸರ್ಕಾರ ಮತ್ತು ಅಜೀಂ ಪ್ರೇಮ್‌ಜಿ ಫೌಂಡೇಷನ್ ವಿದ್ಯಾರ್ಥಿವೇತನದ ಸದುಪಯೋಗಪಡಿಸಿಕೊಳ್ಳುವ ಕುರಿತು**

**ಉಲ್ಲೇಖ:**1. ಡಾ. ಎಂ. ಸಿ ಸುಧಾಕರ್, ಉನ್ನತ ಶಿಕ್ಷಣ ಸಚಿವರು, ಇವರ ಪತ್ರ ಸಂಖ್ಯೆ:ಉಶಿಸ/381/2025 ದಿನಾಂಕ:06.09.2025

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:16.09.2025

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ಉತ್ತೇಜನ ಕ್ರಮವಾಗಿ ಕರ್ನಾಟಕ ಸರ್ಕಾರ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ ಸಹಯೋಗದಲ್ಲಿ **"ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ನಾತಕ ಕೋರ್ಸ್‌ಗಳಿಗೆ(ಪದವಿ-ವೃತ್ತಿಪರ/ತಾಂತ್ರಿಕ/ತಾಂತ್ರಿಕೇತರ, ಡಿಪ್ಲೋಮಾ ಹಾಗೂ ಪಿಯುಸಿ ನಂತರದಲ್ಲಿನ ಐ.ಟಿ.ಐ) ಪ್ರವೇಶಾತಿ"** ಪಡೆಯುವ (ಪ್ರತಿ ವರ್ಷ ಸುಮಾರು 37,000) ವಿದ್ಯಾರ್ಥಿನಿಯರಿಗೆ 2025-26, 2026-27, 2027-28ನೇ ಶೈಕ್ಷಣಿಕ ಸಾಲಿನವರೆವಿಗೂ ವಿದ್ಯಾರ್ಥಿವೇತನ ನೀಡುವ ಕುರಿತಂತೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ.

ಸದರಿ ಯೋಜನೆಯ ಲೋಕಾರ್ಪಣೆ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪ ಮುಖ್ಯಮಂತ್ರಿಯವರ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ ಅಧ್ಯಕ್ಷರಾದ ಡಾ. ಅಜೀಂ ಪ್ರೇಮ್ ಜೀ ರವರ ಘನ ಉಪಸ್ಥಿತಿಯಲ್ಲಿ ದಿನಾಂಕ:19.09.2025 ರಂದು ಸಂಜೆ.04.00 ಗಂಟೆಗೆ ಜಿ.ಕೆ.ವಿ.ಕೆ ವಿಶ್ವವಿದ್ಯಾನಿಲಯ ಆವರಣದ **"ಡಾ.ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣ"** ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸರ್ಕಾರಿ/ಅನುದಾನಿತ/ಅನುದಾನರಹಿತ ಕಾಲೇಜುಗಳ ವಿದ್ಯಾರ್ಥಿನಿಯರು ಸದರಿ ಯೋಜನೆಯ ಸದುಪಯೋಗಪಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ತಿಳಿಸಿರುತ್ತಾರೆ.

ಈ ಸಂಬಂಧ ತಮ್ಮ ವಿಭಾಗಗಳ/ಕಾಲೇಜುಗಳ ವಿದ್ಯಾರ್ಥಿನಿಯರು ಇದರ ಸದುಪಯೋಗಪಡಿಸಿಕೊಳ್ಳಲು ಅಗತ್ಯ ಕ್ರಮವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

**ಆದೇಶದ ಮೇರೆಗೆ**

**ಉಪಕುಲಸಚಿವರು**

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಗೆ,**

1. ಅಧ್ಯಕ್ಷರು/ಸಂಯೋಜಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುವಿತು.
2. ಅಧ್ಯಕ್ಷರು/ಸಂಯೋಜಕರು ಸ್ನಾತಕೋತ್ತರ ವಿಜ್ಞಾನ ವಿಭಾಗಗಳು,"ಜ್ಞಾನಸಿರಿ ಕ್ಯಾಂಪಸ್" ಬಿದರಕಟ್ಟೆ, ಹೆಬ್ಬೂರು ಹೋಬಳಿ, ತುವಿತು.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ/ಸಂಯೋಜಿತ ಕಾಲೇಜುಗಳು, ತುವಿತು.

**ಪ್ರತಿಗಳು:**

1. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಎಸ್.ಎಸ್.ಪಿ ನೋಡಲ್ ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ಗಣಕಯಂತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಈ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ಇ-ಮೇಲ್ ಮೂಲಕ ಕಳುಹಿಸಲು ಸೂಕ್ತ ಕ್ರಮವಹಿಸುವುದು.
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುವಿತು.
5. ಕಚೇರಿ ಪ್ರತಿ.

ಡಾ. ಎಂ.ಸಿ. ಸುಧಾಕರ್, ಎಂ.ಡಿ.ಎಸ್.
Dr. M.C. SUDHAKAR, M.D.S.

ಉನ್ನತ ಶಿಕ್ಷಣ ಸಚಿವರು ಹಾಗೂ
ಜಿಲ್ಲಾ ಉಸ್ತುವಾರಿ ಸಚಿವರು, ಚಿಕ್ಕಬಳ್ಳಾಪುರ
ಕರ್ನಾಟಕ ಸರ್ಕಾರ
Minister for Higher Education &
District-incharge Minister, Chikkaballapur
Govt. of Karnataka

ಸಂಖ್ಯೆ: ಉಶಿಸ/ 381 /2025

ದಿನಾಂಕ: 06.09.2025

ಪ್ರೊ.ವೆಂಕಟೇಶ್ವರಲು ರವರೆ,

ಸರ್ಕಾರಿ ಶಾಲೆ ಮತ್ತು ಕಾಲೇಜಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ಉತ್ತೇಜನ ಕ್ರಮವಾಗಿ ಕರ್ನಾಟಕ ಸರ್ಕಾರ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ ಸಹಯೋಗದಲ್ಲಿ **"ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ, ಸರ್ಕಾರಿ/ಅನುದಾನಿತ/ಅನುದಾನ ರಹಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ನಾತಕ ಕೋರ್ಸುಗಳಿಗೆ (ಪದವಿ-ವೃತ್ತಿಪರ/ತಾಂತ್ರಿಕ/ತಾಂತ್ರಿಕೇತರ, ಡಿಪ್ಲೋಮಾ ಹಾಗೂ ಪಿಯುಸಿ ನಂತರದಲ್ಲಿನ ಐ.ಟಿ.ಐ) ಪ್ರವೇಶಾತಿ" ಪಡೆಯುವ (ಪ್ರತಿ ವರ್ಷ ಸುಮಾರು 37,000) ವಿದ್ಯಾರ್ಥಿನಿಯರಿಗೆ 2025-2026, 2026-2027, 2027-2028ನೇ ಶೈಕ್ಷಣಿಕ ಸಾಲಿನವರೆಗೂ ವಿದ್ಯಾರ್ಥಿ ವೇತನ ನೀಡುವ ಕುರಿತಂತೆ ಒಡಂಬಡಿಕೆ ಮಾಡಿಕೊಳ್ಳಲಾಗುತ್ತಿದೆ.**

ಸದರಿ ಯೋಜನೆಯ ಲೋಕಾರ್ಪಣೆ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಉಪ ಮುಖ್ಯಮಂತ್ರಿಯವರ ಹಾಗೂ ಅಜೀಂ ಪ್ರೇಮ್ ಜೀ ಫೌಂಡೇಷನ್ ಅಧ್ಯಕ್ಷರಾದ ಡಾ.ಅಜೀಂ ಪ್ರೇಮ್‌ಜಿ ರವರ ಘನ ಉಪಸ್ಥಿತಿಯಲ್ಲಿ **ದಿನಾಂಕ: 19.09.2025 ರಂದು ಸಂ:04.00 ಗಂಟೆಗೆ ಜಿ.ಕೆ.ವಿ.ಕೆ ವಿಶ್ವವಿದ್ಯಾಲಯ ಆವರಣದ "ಡಾ.ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣ" ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.**

**ಈ ಹಿನ್ನೆಲೆಯಲ್ಲಿ ತಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಸರ್ಕಾರಿ/ ಅನುದಾನಿತ/ ಅನುದಾನರಹಿತ ಕಾಲೇಜುಗಳ ವಿದ್ಯಾರ್ಥಿನಿಯರು ಸದರಿ ಯೋಜನೆಯ ಸದುಪಯೋಗಪಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ಮೇಲ್ಕಂಡ ಕಾರ್ಯಕ್ರಮದಲ್ಲಿ ತಾವು ಭಾಗವಹಿಸುವಂತೆ ಕೋರಿದೆ.**

**ವಂದನೆಗಳೊಂದಿಗೆ,**

(ಡಾ.ಎಂ.ಸಿ.ಸುಧಾಕರ್)

ರವರಿಗೆ,

**ಪ್ರೊ.ವೆಂಕಟೇಶ್ವರಲು
ಕುಲಪತಿಗಳು
ತುಮಕೂರು ವಿಶ್ವವಿದ್ಯಾಲಯ,
ತುಮಕೂರು.**

ಕ್ರ.ಸಂ. 083
ದಿನಾಂಕ 11/9/25

Registrar
11/9/25

ಕಛೇರಿ ವಿಳಾಸ : # 344/345, 3ನೇ ಮಹಡಿ, ವಿಕಾಸ ಸೌಧ, ಬೆಂಗಳೂರು - 560 001.
ದೂರವಾಣಿ ಸಂಖ್ಯೆ : 080-2203 4781 / 080-2238 3418. ಇ-ಮೇಲ್: heminkar345@gmail.com
Office Address : # 344/345, 3rd Floor, Vikasa Soudha, Bengaluru - 560001.
Phone No. : 080-2203 4781 / 080-2238 3418. e-mail: heminkar345@gmail.com